**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**<u>ದಿನಾಂಕಃ-03.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಎಸ್.ಆರ್.ಪಿ.ವಕೀಲರಿಂದಃ</u>**

ನಾನು ವ್ಯವಸಾಯ ಮತ್ತು ಮದ್ಯದ ವ್ಯಾಪಾರ ನಡೆಸುತ್ತೇನೆ. ನಾನು ಮಾಜಿ ಚೇಳೂರು ಗ್ರಾಮ ಪಂಚಾಯಿತಿ ಸದಸ್ಯ ಎಂದರೆ ಸರಿ. ಆದ್ದರಿಂದ ನಾನು ಚೇಳೂರಿನಲ್ಲಿ ಪ್ರಭಾವಿ ವ್ಯಕ್ತಿ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಖಾತೆ ನಂಬರ್ ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ವಿಸ್ತೀರ್ಣ 30*40 ಅಡಿ. ಅದರ ವಿಸ್ತೀರ್ಣ ಪೂರ್ವಕ್ಕೆ- ಶೋಭಮ್ಮರವರ ಮನೆ , ಪಶ್ಚಿಮಕ್ಕೆ- ರಾಜ್ಯ ಹೆದ್ದಾರಿ (ನಿಟ್ಟೂರು ರಸ್ತೆ), ಉತ್ತರಕ್ಕೆ- ನಂಜುಂಡಪ್ಪರವರ ಮಗ ಶಿವಣ್ಣರವರ ಖಾಲಿ ನಿವೇಶನ, ದಕ್ಷಿಣಕ್ಕೆ- ವಾದಿ ಗಿರಿಜಮ್ಮರವರಿಗೆ ಮಂಜೂರಾದ ಖಾಲಿ ನಿವೇಶನ. ನಾನು ಮಾಜಿ ಗ್ರಾಮ ಪಂಚಾಯಿತಿ ಸದಸ್ಯನಾದ್ದರಿಂದ ಪಂಚಾಯಿತಿಯಿಂದನಿವೇಶನಗಳನ್ನು ಮಂಜೂರು ಮಾಡುವ ವಿಧಾನದ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿ.

2. ವಾದಿ ಚೇಳೂರು ಗ್ರಾಮಪಂಚಾಯಿತಿಗೆ ತನಗೆ ವಾಸವಿರಲು ಯಾವುದೇ ಆಸ್ತಿ ಇರುವುದಿಲ್ಲ ಎಂದು ಅರ್ಜಿ ನೀಡಿದ್ದರ ಮೇರೆಗೆ ಪಿಡಿಒ ಸ್ಥಳ ತನಿಖೆ ನಡೆಸಿ ದಾವಾಸ್ವತ್ತನ್ನು ವಾದಿಗೆ ಮಂಜೂರು ಮಾಡಿರುತ್ತಾರೆ. ನಾನು 2017 ರಿಂದ 2023 ರವರೆಗೆ ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದು ಸದರಿ ಕಾಲಾವಧಿಯಲ್ಲೇ ವಾದಿಗೆ ದಾವಾಸ್ವತ್ತು ಮಂಜೂರಾಗಿದ್ದು ಅದರ ನಿರ್ದಿಷ್ಟ ದಿನಾಂಕ ನನಗೆ ಗೊತ್ತಿಲ್ಲ. ನಿವೇಶನ ರಹಿತ ವ್ಯಕ್ತಿ ಅರ್ಜಿ ನೀಡಿದರೆ ಮಾತ್ರ ನಿವೇಶನವನ್ನು ಮಂಜೂರು ಮಾಡಲಾಗುವುದು ಎಂದರೆ ಸರಿ. ವಾದಿವಾದಪತ್ರದಲ್ಲಿ ದಾವಾಸ್ವತ್ತು ತನ್ನ ಪಿತ್ರಾರ್ಜಿತ ಆಸ್ತಿ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿ ದಾವಾಸ್ವತ್ತನ್ನು ವಾದಿಯಅಜ್ಜಿಯ ಮೇರೆಗೆ ಪಂಚಾಯಿತಿಯವರು ಮಂಜೂರು ಮಾಡಿರುತ್ತಾರೆ ಎನ್ನುತ್ತಾರೆ.

3. ದಾವಾಸ್ವತ್ತಿನ ಖಾತಾ ಎಕ್ಸ್ ಟ್ರ್ಯಾಕ್ಟ್ ನಲ್ಲಿ 30*30 ಅಡಿಗಳು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ವಾದಿಗೆ 30*40 ಅಡಿಗಳ ನಿವೇಶನ ಮಂಜೂರಾಗಿದ್ದು ಅದು ಖಾತಾ ಎಕ್ಸ್ ಟ್ರ್ಯಾಕ್ಟ್ ನಲ್ಲಿ ಹೇಗೆ ಬದಲಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಗೆ 2017 ರಲ್ಲಿ ಖಾಲಿನಿವೇಶನದ ಖಾತೆಯಾಗಿರುತ್ತದೆ ಎಂದರೆ ಸರಿ. ದಿಃ30-08-2018 ರ ಗ್ರಾಮಪಂಚಾಯಿತಿಯ ಸಭಾನಡಾವಳಿಯಂತೆ ವಾದಿಗೆ ದಾವಾಸ್ವತ್ತನ್ನು ಮಂಜೂರು ಮಾಡಲು ನಾನು ಶಿಫಾರಸ್ಸು ಮಾಡಿರುತ್ತೇನೆ ಎಂದರೆ ಸರಿ. ರಾಜ್ಯ ಹೆದ್ದಾರಿಯ ಮಧ್ಯದಿಂದ 120 ಅಡಿ ಬಫರ್ ಜೋನ್ ಇದ್ದು ಆದರೂ ಸಹ ಅಕ್ರಮವಾಗಿ ರಾಜ್ಯ ಹೆದ್ದಾರಿಯ ಪಕ್ಕದಲ್ಲಿರುವ ಖಾಲಿ ಜಾಗವನ್ನು ವಾದಿಗೆ ಮಂಜೂರು ಮಾಡಿಸಿರುತ್ತೇನೆ ಎಂದರೆ ಸಾಕ್ಷಿ ಸದರಿ ನಿಯಮದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

4. ದಾವಾಸ್ವತ್ತಿನಲ್ಲಿ ಸುಮಾರು 15-20 ವರ್ಷಗಳಿಂದ ವಾದಿ ಪೆಟ್ಟಿಗೆಅಂಗಡಿಯನ್ನು ಇಟ್ಟುಕೊಂಡು ಟೀ ವ್ಯಾಪಾರ ಮಾಡುತ್ತಿದ್ದಾರೆ .ಸದರಿ ಅಂಗಡಿಯನ್ನು ನಿರ್ಮಿಸಲು ಪಂಚಾಯಿತಿಯಿಂದ ಪರವಾನಗಿ ಪಡೆದುಕೊಳ್ಳಬೇಕು ಎಂದರೆ ಸರಿ. ಸಾಕ್ಷಿ ಮುಂದುವರಿದು ಪೆಟ್ಟಿಗೆ ಅಂಗಡಿಯಾದ್ದರಿಂದ ವಾದಿ ಪರವಾನಗಿ ಪಡೆದುಕೊಂಡಿಲ್ಲ ಎನ್ನುತ್ತಾರೆ. ನಿವೇಶನ ರಹಿತ ವ್ಯಕ್ತಿಗೆ ಖಾಲಿ ನಿವೇಶನ ಮಂಜೂರು ಮಾಡಿದಾಗ ಅದರಲ್ಲಿ ವಾಸದ ಮನೆಯನ್ನು ಮಾತ್ರ ನಿರ್ಮಿಸಬೇಕು ಎಂದು ನಿಯಮಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಚಾಲ್ತಿಯಲ್ಲಿದ್ದಾಗ ದಿಃ 16-05-2024 ರಂದು ಚೇಳೂರು ಗ್ರಾಮಪಂಚಾಯಿತಿಯವರು ದಾವಾಸ್ವತ್ತಿನಲ್ಲಿ ವಾದಿ ಅಕ್ರಮವಾಗಿ ಪೆಟ್ಟಿಗೆ ಅಂಗಡಿ ಇಟ್ಟಿರುತ್ತಾರೆ ಎಂದು ನೋಟೀಸ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ದಾವಾಸ್ವತ್ತಿನ ಪೂರ್ವದಲ್ಲಿ ಕೆಂಪಮ್ಮರವರಿಗೆ ಮಂಜೂರಾದ ಆಸ್ತಿಯಲ್ಲಿ 1 ನೇ ಪ್ರತಿವಾದಿ ಸುಮಾರು 30 ರಿಂದ 40 ವರ್ಷಗಳಿಂದ ಸ್ವಾಧೀನದಲ್ಲಿರುತ್ತಾರೆ. ದಾವಾಸ್ವತ್ತು 1 ನೇ ಪ್ರತಿವಾದಿಯ ಮನೆಯ ಎದುರು ಇರುತ್ತದೆ ಎಂದರೆ ಸಾಕ್ಷಿ ಸದರಿ ಮನೆಯ ಪಶ್ಚಿಮಕ್ಕೆ ಇರುತ್ತದೆ ಎನ್ನುತ್ತಾರೆ.

6. 1ನೇ ಪ್ರತಿವಾದಿ ಸುಮಾರು 30 ವರ್ಷಗಳಿಂದ ದಾವಾಸ್ವತ್ತಿನ ಮೂಲಕ ಓಡಾಡುತ್ತಿದ್ದು ಇತ್ತೀಚೆಗೆ ಅಕ್ರಮವಾಗಿ ದಾವಾಸ್ವತ್ತನ್ನು ವಾದಿಗೆ ಮಂಜೂರು ಮಾಡಲಾಗಿರುತ್ತದೆ ಎಂದರೆ ಸಾಕ್ಷಿ ದಾವಾಸ್ವತ್ತು ಇರುವ ಜಾಗದಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎನ್ನುತ್ತಾರೆ. ದಾವಾಸ್ವತ್ತು ನಿವೇಶನ ಇರುವ ಸ.ನಂಃ ನನಗೆ ಗೊತ್ತಿಲ್ಲ. ವಾದಿಗೆ ಅನುಮೋದಿಸಿ ದಾವಾಸ್ವತ್ತನ್ನು ಅಕ್ರಮವಾಗಿ ಮಂಜೂರು ಮಾಡಿಸಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ದಾವಾಸ್ವತ್ತು ತನ್ನ ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ಹೇಳಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**
**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**